ಶಿವಮೊಗ್ಗ ಡಿಸ್ಟ್ರಿಕ್ಟ್.
ಫಾರೆಸ್ಟ್ ಇಲಾಖೆ.
ನೋಟಿಫಿಕೇಷನ್.
ತಾರೀಖು 24ನೇ ನವಂಬರ್ 1896.

ಸ್ ೧೮೯೦ನೇ ಇಸವಿ ಫಿಬ್ರವರಿ ತಾರೀಖು 15ನೇ ಮೈಸೂರ್ ಗೆಜೆಟ್ 2ನೇ ಭಾಗದ ಪುಟದಲ್ಲಿ ಪ್ರಯಿಷ್ ಮಾಡಿರುವ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ನೋಟಿಫಿಕೇಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,— ಈ ಕೆಳಗೆ ನಮೂದಿಸುವ ಶಿವಮೊಗ್ಗ ಡಿಸ್ಟ್ರಿಕ್ಟಿನ ಪೆಂಕಿಯಿಂದ ರಕ್ಷಿಸಲ್ಪಟ್ಟ ಸ್ಟೇಟ್ ಫಾರೆಸ್ಟ್ಸು ಮತ್ತು ಪ್ಲಾಂಟೇಷನ್‌ಗಳನ್ನ 1897ನೇ ಇಸವಿ ಜನವರಿ 1ನೇ ತಾರೀಖು ಲಾಗಾಯತು ಮೇ ಆಖೈರ್ ವರಿಗೂ ಬಂದ್ ಮಾಡಲ್ಪಟ್ಟಿರುತ್ತೆ. ಅಂಬುಗಾರರಿಗೂ, ಪಿಕಾರಿಗಳಿಗೂ, ಪೇಟೆಗಾರರಿಗೂ ಸಹ ಲೈಸೆನ್ಸ್ ಕೊಡಲ್ಪಡುವದಿಲ್ಲ. ರೂಲ್ಸ್ ಅತಿಕ್ರಮಿಸಿ ಪ್ರವೇಶಿಸುವವರನ್ನ ಕ್ರಮವಾಗಿ ಶಿಕ್ಷಿಸಲ್ಪಡುತ್ತೆ.

ನಂಬರ್.	ಫಾರಸ್ಟುಗಳ ಹೆಸರು.	ತಾಲ್ಲೂಕುಗಳ ಹೆಸರು.
1	ಶಂಕರಗುಡ್ಡ, ಭೂತನಬೈಲ್ ಫಾರೆಸ್ಟ್	ಶಿವಮೊಗ್ಗ, ತೀರ್ಥಹಳ್ಳಿ
2	ಪುರದಾಳ	ಶಿವಮೊಗ್ಗ
3	ಕುಂಜೇನಹಳ್ಳಿ	ಡಿಟೋ
4	ಅನುಪಿನಕಟ್ಟೆ ಪ್ಲಾಂಟೇಷನ್	ಡಿಟೋ
5	ಸಕ್ರೆಬೈಲ್ ಫಾರೆಸ್ಟ್	ಡಿಟೋ ತೀರ್ಥಹಳ್ಳಿ
6	ಡಿಟೋ ಪ್ಲಾಂಟೇಷನ್	ಶಿವಮೊಗ್ಗ
7	ಜೋಕಿನಡೆಹಳ್ಳಿ	ಡಿಟೋ
8	ಆಯನೂರು ಪ್ಲಾಂಟೇಷನ್	ಡಿಟೋ
9	ಆಲಕೊಳ ಡಿಟೋ	ಡಿಟೋ
10	ಕರ್ಲಕೊಪ್ಪ ಸಂದಲ್ ಪ್ಲಾಂಟೇಷನ್	ಡಿಟೋ
11	ಉಂಬಳಿ ಬೈಲ್ ಹುಣಸೆಕಟ್ಟೆ	ಡಿಟೋ
12	ಆಲದಹಾರ	ಡಿಟೋ
13	ಕುಂಸಿ	ಡಿಟೋ
14	ಮುಸರೂರು	ನಗರ
15	ಕುಕ್ಕವಾಡಾ ಉಬ್ಬಾಣಿ	ಶಿವಮೊಗ್ಗ, ಚನ್ನಗಿರಿ, ತರೀಕೆರೆ
16	ಚನ್ನಗಿರಿ ಪ್ಲಾಂಟೇಷನ್	ಚನ್ನಗಿರಿ
17	ತೆಲಗಡ್ಡೆ, ಅರತೆಲಗಡ್ಡೆ	ಸೊರಬ
18	ಬಟ್ಟಿದಕುರ್ಲಿ	ಡಿಟೋ
19	ಸಿದ್ದೇಹಳ್ಳಿ ಪ್ಲಾಂಟೇಷನ್	ಡಿಟೋ
20	ಹಳೆಸೊರಬ ಡಿಟೋ	ಡಿಟೋ
21	ಚಂದ್ರಗುತ್ತಿ	ಡಿಟೋ
22	ಕವಡಿ	ಡಿಟೋ
23	ಕವಲಿ	ಶಿಕಾರಿಪುರ
24	ತೊಗರಸಿ	ಡಿಟೋ
25	ಬಸವನಂದಿಹಳ್ಳಿ	ಡಿಟೋ
26	ಕಾಳೇನಹಳ್ಳಿ ಪ್ಲಾಂಟೇಷನ್	ಡಿಟೋ
27	ಗಂಗವನಸರ ಸ್ಟೇಟ್ ಫಾರೆಸ್ಟ್ಸು ಮತ್ತು ಹಾರೋಗೊಪ್ಪ ಯೆರೆ ಕಟ್ಟೆ ಕಾಪಿನ ಜಾಗಾ	ಡಿಟೋ ಹೊನ್ನಾಳಿ
28	ಕರಡಿಬಟ್ಟು	ಡಿಟೋ ಶಿವಮೊಗ್ಗ
29	ಚಂದ್ರಕಲ	ಸಿಕಾರಿಪುರ
30	ಬೆಳಂದೂರು	ಡಿಟೋ
31	ಮಲಂದೂರು	ಸಾಗರ
32	ಮಲೆಬೆನ್ನೂರು	ಹೊನ್ನಾಳಿ, ದಾವಣಗೆರೆ

ಸಿ. ನಾರಾಯಣರಾವ್,
ಡೆಪ್ಯೂಟಿ ಕ್ವಸರ್‌ವೇಟರ್.

ಚಿತ್ರದುರ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖೆ.
ಇನ್ವಿಹಾರ್‌ನಾಮೆ.
ತಾರೀಖು 1ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನ್‌ನಲ್ಲಿ ಕಂಡ ತಾಲ್ಲೂಕು ಖಜಾನೆಗಳಲ್ಲಿ ಸಂದಲ್ ತುಕಡಾಗಳು ಸ್ವಂತ ಉಪಯೋಗಕ್ಕೊಸ್ಕರ ಚಿಲ್ಲರೆಯಾಗಿ ಬಿಕರಿ ಮಾಡಲ್ಪಡುತ್ತೆ.
ದಾವಣಗೆರೆ, ಹೊಳಲಕೆರೆ, ಚಿತ್ರದುರ್ಗ. ಇಷ್ಟವುಳ್ಳವರು ಕ್ರಯಕ್ಕೆ ಪಡಿಯಬಹುದು.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ತಾರೀಖು 8ನೇ ಡಿಸೆಂಬರ್ 1896.

ಇದರಿಂದ ಡಿಸ್ಟ್ರಿಕ್ಟ್ ಮುಳೆ ಇರುವ ತಮ್ಮಾ ತಾಲ್ಲೂಕು ಪೊಲೀಸಿನವರು ಮತ್ತು ಗ್ರಾಮ ನಾಕರರಿಗೂ ತಿಳಿಯಪಡಿಸುವ ದೇನಂದರೆ,—ಮಾರ್ಚಿನಲ್ಲಿ ನಮೂದಿಸುವ ತಾಲ್ಲೂಕುಗಳಲ್ಲಿರುವ ತಂಗಡಿ ಚಕ್ಕೆ ಜ

ಹೊಳಲಕೆರೆ,—ದಾವಣಗೆರೆ.
ಜಗಲೂರು,—ಹೊಳಕಾಲ್ಮೂರು.

ಮಾವಣೆ ಹಕ್ಕನ್ನು 1896ನೇ ನವಂಬರ್ ಗುರ್ರೇ ಲಾಗಾಯತು 1897ನೇ ಜ್ಯಾ ಆಬೈರ್ ವರಿವಿಗೆ ಹರಾಜು ಮಾಡಲ್ಪಟ್ಟಿದೆ. ಬಾಕಿ ತಾಲ್ಲೂಕುಗಳಲ್ಲಿ ತಂಗಡಿಚಕ್ಕೆ ಜ ಮಾಯಿಸಲು ಲೈಸೆನ್ಸ್ ಕೊಡುವದನ್ನು ಮನ್ನಾ ಮಾಡಿರುತ್ತೆ. ಮನ್ನಾ ಮಾಡಿರತಕ್ಕ ತಾಲ್ಲೂಕುಗಳ ಗ್ರಾಮದ ಸರಹದ್ದಿನಲ್ಲಿ ಸರ್ಕಾರಿ ಬಂಜರ್ ಜಮೀನಿನಲ್ಲಿ ಯಾರೂ ತಂಗಡಿಚಕ್ಕೆ ಜಮಾಯಿಸಕೂಡದು. ಹಾಗೆ ಜಮಾ ಯಿಸಿದಲ್ಲಿ ಕಳುವಿನಿಂದ ಜಮಾಯಿಸಿದಂತೆ ಭಾವಿಸಿ ಪೊಲೀಸಿನವರು ಮತ್ತು ಗ್ರಾಮ ನಾಕರರು ಕ್ರಮವಾಗಿ ತಾಲ್ಲೂಕು ಮ್ಯಾಜಿಸ್ಟ್ರೇಟರಲ್ಲಿ ಪ್ರಾಸಿಕ್ಯೂಷನ್ ಮಾಡಬೇಕು. ಇಂಥಾ ಮೊಕದ್ದಮೆ ಪತ್ತೇಮಾಡಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಿದಲ್ಲಿ ಅಂಥಾ ಪತ್ತೇ ತರ ಡೂದು ನಡಿಸಿದವರಿಗೆ ಮುನಾಸಬ್ ಇನಾಂ ಕೊಡಲು ಸಿಫಾರಸ್ ಮಾಡಲಾಗುತ್ತೆ.

ಎಂ. ಎಸ್. ನಾರಾಯಣರಾವ್,
ಡೆಪ್ಯೂಟಿ ಕಮ್ಮಿಷನರ್.

ನೋಟಸ್.

ತಾರೀಖು 17ನೇ ಡಿಸೆಂಬರ್ 1896.

ಚಿತ್ರದುರ್ಗದ ಡಿಸ್ಟ್ರಿಕ್ಟು ದಾವಣಗೆರೆ ಮತ್ತು ಹರಿಹರದ ಹಿಂದೂಸ್ತಾನಿ ಸರ್ಕಾರಿ ಗಂಡು ಹುಡುಗರ ಪಾಠಶಾಲೆಗಳಲ್ಲಿ ಮೂಹೆಯಾ ನಾ ಏಳು ರೂಪಾಯಿ ತಲಬಿನ ಮೇಲೆ ಮರ್ಜಿ ಕೆಲಸನವು ಖಾಲಿ ಇರುತ್ತೆ. ಕನ್ನಡ ಮತ್ತು ಹಿಂದೂಸ್ತಾನಿ ಭಾಷೆಗಳಲ್ಲಿ ಪರಿಶ್ರಮ ಉಳ್ಳವರು ಬೇಕಾಗಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟು ಹೊಳಕಾಲ್‌ಮೂರು ತಾಲ್ಲೂಕು ಕೋಸಾಗರದಲ್ಲಿ ಮೂಹೆಯಾನಾ ಎಂಟು ರೂಪಾಯಿ ತಲಬುಳ್ಳ ಬೇಗಾರಿ (ಮೂದಿಗ) ಸ್ಕೂಲ್ ಉಪಾಧ್ಯಾಯ ಕೆಲಸ ಖಾಲಿ ಇರುತ್ತೆ.

ದರಖಾಸ್ತುದಾರರು ಕನ್ನಡದಲ್ಲಿ ಅಥವಾ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಲೋವರ್ ಸೆಕಂಡರಿ ಪರೀಕ್ಷೆ ಕೊಟ್ಟವರಾಗಿ ಯೂ ಮತ್ತು ಇಪ್ಪತ್ತೈದು ವರ್ಷ ವಯಸ್ಸಿಗೆ ಮಿಾರದವರಾಗಿಯೂ ಇರಬೇಕು. ದರಖಾಸ್ತುಗಳು ಈ ಕೆಳಗೆ ರುಜು ಮಾಡಿರತಕ್ಕವರ ಆಫಿಸಿಗೆ 1897ನೇ ಜನವರಿ ಆಬೈರ್ ಒಳಗಾಗಿ ತಲಪಬೇಕು.

ಕೆ. ರಂಗಪ್ಪ, ಚಿತ್ರದುರ್ಗದ ಡಿ|| ಸ್ಕೂಲ್‌ಗಳ ಡೆಪ್ಯೂಟಿ ಇನ್‌ಸ್ಪೆಕ್ಟರ್.

ಪ್ರಕಟನೆ.

ಮೈಸೂರು ಗವರ್ಮೆಂಟ್ ಓರಿಯಂಟಲ್ ಲೈಬ್ರರಿಗೆ ಸಂಬಂಧಪಟ್ಟ ಈ ಕೆಳಗೆ ನಮೂದಿಸಿರುವ ಪುಸ್ತಕಗಳು ಬೆಂಗಳೂರು ಗವರ್ಮೆಂಟ್ ಸೆಂಟ್ರಲ್ ಬುಕ್ ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ.

		ರೂ. ಆ. ಪೈ.
ನಂ. 1.	ಆಪಸ್ತಂಭ ಗೃಹ್ಯಸೂತ್ರ	1-12—0
ನಂ. 2.	ಆಪಸ್ತಂಭ ಪರಿಭಾಷಾಸೂತ್ರ	1—0—0
ನಂ. 3.	ಮಾಧವಾಚಾರ್ಯ ಕೃತ ಧಾತುವೃತ್ತಿ. 2ನೇ ಸಂಪುಟ 1ನೇ ಭಾಗ ..	2—0—0
ನಂ. 4.	ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 1ನೇ ಸಂಪುಟ ..	2—8—0
ನಂ. 5.	ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 2ನೇ ಸಂಪುಟ ..	2—8—0
ನಂ. 6.	ಶ್ರೀಶಂಕರಾಚಾರ್ಯ ವಿರಚಿತ ದಕ್ಷಿಣಾಮೂರ್ತಿಸ್ತೋತ್ರ ..	1—4—0
ನಂ. 7.	ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 3ನೇ ಸಂಪುಟ ..	3—0—0
ನಂ. 8.	ಭಗವದ್ಗೀತ	2-12—0
ನಂ. 11.	ಸೌಂದರ್ಯಲಹರಿ	1—8—0

ತಾರೀಖು 7ನೇ ಡಿಸೆಂಬರ್ 1896ನೇ ಇಸವಿ
ಬೆಂಗಳೂರು.

ನೋಟಸ್.

ಈ ಕೆಳಗೆ ನಮೂದಿಸಿರುವ ಪುಸ್ತಕವು ಬೆಂಗಳೂರು ಗವರ್ಮೆಂಟ್ ಸೆಂಟ್ರಲ್ ಬುಕ್ಸ್ ಡಿಪೋವಿನಲ್ಲಿ ದೊರಿಯುತ್ತದೆ.

1897ನೇ ಇಸವಿಯ ಸಂಸ್ಕೃತ ಲೋವರ್ ಸೆಕಂಡರಿ ಟಿಕಸ್ಟ್ ಬುಕ್ಕು. ಕ್ರಯ 2 ಆಣೆ.

ಎಸ್. ಅಬ್ದುಲ್ ಹೈ,
ಕ್ಯೂರೇಟರ್.

ನೋಟಸ್.

ಜನಗಳ ಉಪಯೋಗಕ್ಕೊಸ್ಕರ ನೇತ್ರಗಳಿಗೆ ಅವುಷಧಿ ಹಾಕತಕ್ಕ ಬಂದು ಸರ್ಕಾರದ ವೈದ್ಯಶಾಲೆಯು ಬೆಂಗಳೂರು ತಾಲ್ಲೂಕು ಕಛೇರಿ ರೋಡಿನಲ್ಲಿ ಸ್ಥಾಪಿಸಲ್ಪಟ್ಟಿರುತ್ತೆ. ಧರ್ಮಾರ್ಥವಾಗಿ, ಅಸಿಸ್ಟೆಂಟ್ ಸರ್ಜ್ಯ ಎಸ್. ವಿ. ರಾಮಸ್ವಾಮಿ ಅಯ್ಯಂಗಾರ್ರವರು, ನೇತ್ರ ರೋಗದಿಂದ ಪೀಡಿತರಾದವರನ್ನು ಪ್ರತಿ ದಿನವೂ ಬೆಳಿಗ್ಯೆ 7 ಘಂಟೆ ಲಾಗಾಯತು 11 ಘಂಟೆ ವರಿವಿಗು ಚಿಕಿತ್ಸೆ ಮಾಡುವರು.

ಪಿ. ಎಚ್. ಬ್ರೆಸ್ಟ್, ಎಂ. ಬಿ.,
ಸೀನಿಯರ್ ಸರ್ಜನ್ ಯೂ ಸ್ಯಾನಿಟೆರಿ ಕಮ್ಮಿಷನರ್,
ಮೈಸೂರ್ ಗವರ್ಮೆಂಟ್.

ನೋಟೀಸ.

ಈ ಕೆಳಗೆ ಕಂಡ ಸ್ಟೇಷ್ಟ್ಗಳಲ್ಲಿ ಇರತಕ್ಕ ಗಾರ್ನಮೆಂಟ್ ಹಾರ್ನೀಸ್ ಕುದುರೆಗಳಿಗೂ ಮತ್ತು ಟ್ಯಾಕ್ಸ್ ಫೋರ್ಟ್‌ಫೋನಿ ವಗೈರೆಗೆ ಬೇಕಾಗುವ ಹುರಳಿಯನ್ನು ಇದರ ಕೆಳಗೆ ವಿವರಿಸಿರುತ್ತೆ.

ಬೆಂಗಳೂರು, ಮೈಸೂರಿಗೆ 1897ನೇ ಇಸವಿ ಏಪ್ರೀಲ್ ಗುರ್ತೀ ಲಾಗಾಯಿತು 1898ನೇ ಇಸವಿ ಮಾರ್ಚಿ ಆಖೈರ್‌ವರಿವಿಗೂ, ಕುಣಿಗಲಿಗೆ 1897ನೇ ಇಸವಿ ಜನವರಿ 15ನೇ ತಾರೀಖು ಲಾಗಾಯಿತು 1898ನೇ ಇಸವಿ ಜನವರಿ 14ನೇ ತಾರೀಖುವರಿವಿಗೂ, ಈ ಮೇರಿಗೆ ಸರಬರಾಯಿ ಮಾಡತಕ್ಕ ಕಂಟ್ರಾಕ್ಟಿಗೋಸ್ಕರ ಬರುವ ಶೀಲ್ ಮಾಡಲ್ಪಟ್ಟ ಟೆಂಡರುಗಳನ್ನ ೧೮೯೭ನೇ ಇಸವಿ ಜನವರಿ ೬ನೇ ತಾರೀಖು ಬುಧವಾರ ಹಗಲು 2 ಘಂಟೆಗಳವರಿವಿಗೂ, ಬೆಂಗಳೂರಲ್ಲಿ ಮಿಲಿಟರಿ ಸೆಕ್ರಟೆರಿ ಸಾಹೇಬರವರ ಆಫೀಸಿಗೆ ಬರಮಾಡಿಕೊಳ್ಳಲ್ಪಡುತ್ತೆ ಯಾಗಿ ದರಖಾಸ್ತುದಾರರು ತಮ್ಮ ತಮ್ಮ ದರಖಾಸ್ತಿನಲ್ಲಿ ಹುರಳಿಯನ್ನು ರೂಪಾಯಿ 1ಕ್ಕೆ( ) ಇಷ್ಟು ಶೇರು ಗಳಪ್ರಕಾರ ಕೊಡುತ್ತೇವೆಂದು ಬರೆಯಬೇಕು. ಮತ್ತು ಪ್ರತಿ ಬಗ್ಗೆ ದರಖಾಸ್ತುಗಳ ಸಂಗಡ 100 ಬಂದು ನೂರು ರೂಪಾಯಿಗಳನ್ನ ಹಾಜರ್ಮಾಡಬೇಕು.

ಮಂಜೂರಾದ ದರಖಾಸ್ತುದಾರರು ಜಾಮೀನಿ ಬಗ್ಗೆ ಬೆಂಗಳೂರು, 500 ರೂ. ಮೈಸೂರ್, 500 ರೂ. ಕುಣಿಗಲ್, 1,000 ರೂ. ಈ ಪ್ರಕಾರ ಡಿಪಾಜಿಟ್ ಇಡಬೇಕು.

ರೋಜೀನಾ ಬೇಕಾಗುವಷ್ಟು ಹುರಳಿಯನ್ನು ಅಯಾಯ ಇನ್‌ಥಾರ್ಜ್ ಆಫೀಸರ್ರ ವಶಕ್ಕೆ ಆಯಾಯ ಸ್ಟೇಷ್ಟನಲ್ಲಿ ಕೊಟ್ಟು ಅವರಿಂದ ರಶೀದಿ ಪಡಿಯಬೇಕು.

ಡಿಪೋ ರಶೀದಿಗಳ ಪ್ರಕಾರ ತಿಂಗಳಿಗೆ ಎಂದು ದಫಾ ಬಿಲ್ ಅವರಲ್ಲಿ ಹಾಜರ್ಮಾಡಿದಲ್ಲಿ ಮೊಬಲಗು ಪಾವತಿ ಮಾಡುತ್ತಾರೆ.

ಮೇಲ್ಕಂಡ ಪ್ರಕಾರ ಸರಿಯಾಗಿ ಸರಬರಾಯಿ ಮಾಡದೆ ತಪ್ಪಿದಲ್ಲಿ ಆ ಕೂಡ್ಲೆ ಡಿಪೋ ಕಂಟ್ರಾಕ್ಟ್ ರದ್ದು ಮಾಡಿ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಾಖಲ್ಮಾಡಲ್ಪಟ್ಟೀತು.

ಮೇಲ್ಕಂಡ ಪ್ರಕಾರ ಮೂರು ಸ್ಟೇಷ್ಟಗಳಿಗೂ ಸೇರಿ ಆಗಲಿ ಅಥವಾ ಪ್ರತ್ಯೇಕ ಪ್ರತ್ಯೇಕವಾಗಿಯೇ ಆಗಲಿ ದರಖಾಸ್ತುಗಳು ಕಳುಹಿಸಬಹುದು.

ಈ ಬಾಬತು ಟೆಂಡರುಗಳನ್ನು ಯಾವ ಕಾರಣವನ್ನು ಹೇಳದೆ ಅಂಗೀಕರಿಸುವ ಅಥವಾ ನಿರಾಕರಿಸುವ ಸ್ವಾತಂತ್ರ್ಯವನ್ನು ಮಿಲಿಟರಿ ಸೆಕ್ರಿಟರಿ ಸಾಹೇಬರವರು ವಹಿಸಿಕೊಂಡಿರುತ್ತಾರೆ.

ಸಾಲು 1ಕ್ಕೆ ಸುಮಾರು ಬೇಕಾಗುವ ಹುರಳಿ.

ಬೆಂಗಳೂರು	.. ..	1,00,000 ಸೇರುಗಳು.
ಮೈಸೂರು	.. ..	80,000 ಡಿಟೋ.
ಕುಣಿಗಲ್	.. ..	3,20,000 ಡಿಟೋ.

ಮಿಲಿಟರಿ ಸೆಕ್ರಿಟರಿ ಆಫೀಸ್,
ತಾರೀಖು 18ನೇ ವಾಯಿದೆ ಡಿಸೆಂಬರ್,
1896ನೇ ಇಸವಿ ಮೊಕ್ಕಾಂ ಬೆಂಗಳೂರ್.

ಹೆಚ್. ಡಾರ್,
ಅಸಿಸ್ಟೆಂಟ್ ಸೆಕ್ರಿಟರಿ.

ಚಿತ್ರದುರ್ಗದ ಡಿಸ್ಟ್ರಿಕ್ಟ್.
ಫಾರೆಸ್ಟ್ ಇಲಾಖೆ.
ನೋಟಿಫಿಕೇಷ್ಟ.
ತಾರೀಖು 17ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1878ನೇ ಇಸವಿ ಜೂನ್ ತಾರೀಖು 3ನೇ ಫಾರೆಸ್ಟ್ ರೂಲ್ಸು 13ನೇ ಸೆಕ್ಷನ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಈ ಕೆಳಗೆ ಕಾಣಿಸಿ ಇರುವ ಸ್ಟೇಟ್ ಫಾರೆಸ್ಟ್ಸು ಮತ್ತು ಪ್ಲಾಂಟೇಷ್ಟಗಳು ಪಯರ್‌ಪ್ರೊಟೆಕ್ಷನ್ ಮಾಡುವದರಿಂದ 1897ನೇ ಇಸವಿ ಜನವರಿ 1ರ ಲಾಗಾಯಿತು ಜೂನ್ ಆಖೈರ್‌ವರಿಗೆ ಪಿಕಾವಿ ಮಾಡುವವರಿಗೆ ಜಂಗಲ್ ಪ್ರವೇಶ ಮನ್ನಾ ಮಾಡಿರುತ್ತೆ. ರೂಲ್ಸು ಅತಿಕ್ರಮಿಸಿ ಪ್ರವೇಶಿಸುವವರನ್ನು ಕ್ರಮವಾಗಿ ಪ್ರಾಸಿಕ್ಯೂಟ್ ಮಾಡಲ್ಪಡುತ್ತೆ.

1	ಜೋಗಿಮಟ್ಟಿ ಸ್ಟೇಟ್ ಫಾರೆಸ್ಟ್ಸು.	3	ಮಲೆಬೆನ್ನೂರು ಸ್ಟೇಟ್ ಫಾರೆಸ್ಟ್ಸು.
2	ನೀರಥಡಿ ಸ್ಟೇಟ್ ಫಾರೆಸ್ಟ್ಸು ಮತ್ತು ಪ್ಲಾಂಟೇಷ್ಟ.	4	ನೇರಲಗುಂದಿ ಪ್ಲಾಂಟೇಷ್ಟ.

ಕೆ. ಶ್ಯಾಮಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್.